ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-4, January - February 2026, Pp. 93-104
©*IIMRD*, Mysuru
IIMRD JOURNALS
www.iimrd.com

ಕರ್ನಾಟಕ ರಾಜಕೀಯದಲ್ಲಿ ಅರಸುರವರ ಸಾಧನೆಗಳು

ಡಾ. ಎನ್. ಸುಶೀಲಮ್ಮ
ಅತಿಥಿ ಅಧ್ಯಾಪಕರು, ಗ್ರಾಮೀಣ ಅಭಿವೃದ್ಧಿ ವಿಭಾಗ, ಜ್ಞಾನಭಾರತಿ ಆವರಣ, ಬೆಂಗಳೂರು
ವಿಶ್ವವಿದ್ಯಾನಿಲಯ, ಬೆಂಗಳೂರು

ಸಾರಾಂಶ: (Abstract)

ಅರಸು ರವರು ನಾಲ್ಕು ದಶಕಗಳ ವರ್ಣಮಯ ರಾಜಕಾರಣ ಮಾಡಿದರು. ಅವರ ಶ್ರೀರಕ್ಷೆಯಾಗಿ ಕೊನೆಯವರೆಗೂ ಅಚಲವಾಗಿ ನಿಂತವರು ಕ್ಷೇತ್ರದ ಮಹಾಜನತೆ. ಸ್ಥಳೀಯ ಪ್ರಮುಖರು ಬೆಂಗಾವಲಾಗಿ ನಿಂತರು. ಶ್ರೀನಿವಾಸ ಅಯ್ಯಂಗಾರರ ಮಾರ್ಗದರ್ಶನ, ಶ್ರೀಸಾಮಾನ್ಯರ ಅನನ್ಯ ಪ್ರೇಮ, ಪ್ರಮುಖರ ಸಹಕಾರದಿಂದ ಅರಸು ಒಬ್ಬ ಹಿರಿಯ ಜನನಾಯಕ ಎನಿಸಿದರು. ಪ್ರಸ್ತುತ ಲೇಖನದಲ್ಲಿ ಕರ್ನಾಟಕ ರಾಜಕೀಯದಲ್ಲಿ ಅರಸುರವರ ಸಾಧನೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಮುಖ್ಯಪದಗಳು (Keywords): *ಕರ್ನಾಟಕ ರಾಜಕೀಯ, ದೇವರಾಜು ಅರಸು, ಹಿಂದುಳಿದ ವರ್ಗ, ಕಾಂಗ್ರೆಸ್ ಸರ್ಕಾರ, ಹುಣಸೂರು.*

ಪೀಠಿಕೆ

ಅರಸರ ರಾಜಕೀಯ ಜೀವನದಲ್ಲಿ ನಾಗಮಂಗಲದ ನರಸಿಂಹೇಗೌಡ, ಹುಣಸೂರಿನ ಇಬ್ರಾಹಿಂಖಾನ್ ಸಾಹೇಬ್, ಶಕುನಿಪುರದ ಸಿದ್ದೇಗೌಡ, ಗೌಡಗೆರೆ ಸುಬ್ಬರಾಯರು, ತೆಂಕಲಕೊಪ್ಪಲು ಚೆನ್ನರಸೇಗೌಡ, ಬಿಳಿಕೆರೆ ಶಿವನಂಜೇಗೌಡ ಇತ್ಯಾದಿ ಜನರ ಶ್ರಮ, ತ್ಯಾಗ, ಸಹಕಾರ ಅರಸರ ರಾಜಕೀಯ ಬದುಕಿನ ಬೆಳವಣಿಗೆಗೆ ಪೂರಕವಾದ ಶಕ್ತಿಗಳು ಅರಸರ ಆಪ್ತ ಸ್ನೇಹಿತ ಡಾ.ಎಚ್.ಎಲ್. ತಿಮ್ಮೇಗೌಡರ ದೇಣಿಗೆಯೂ ವಿಶಿಷ್ಟವಾದುದು. ವೈದ್ಯವೃತ್ತಿಯನ್ನು ಅರಸಿ ಹನಸೋಗೆಯಿಂದ ಹುಣಸೂರಿಗೆ ಬಂದ ತಿಮ್ಮೇಗೌಡರು ಅಲ್ಲಿನ ಸಾಮಾಜಿಕ, ರಾಜಕೀಯ, ಪ್ರಬಲಶಕ್ತಿಯಾಗಿ ಬೆಳೆದವರು. ತಮ್ಮ ವೃತ್ತಿಯೊಂದಿಗೆ ಅಪಾರ ಜನಸಂಪರ್ಕವನ್ನು ಹೊಂದಿದ್ದ ಅತ್ಯಂತ ಪ್ರಭಾವಿ, ಅವರ ಸಹಕಾರವಿಲ್ಲದೆ ಯಾವ ರಾಜಕಾರಣಿಯೂ ಜಯಗಳಿಸುವುದು ಅಸಾಧ್ಯ ಎನ್ನುವ ಪರಿಸ್ಥಿತಿ 1969ರವರೆಗೂ ಅರಸು–ತಿಮ್ಮೇಗೌಡರ ಸಂಬಂಧ 'ರಾಮ–ಲಕ್ಷ್ಮಣ'ರಂತೆ. ಅರಸರಿಗೆ ಬೆಂಬಲ ನೀಡಿದ ಗೌಡರು ತಾವೂ ಬೆಳೆದರು. ನಿಜಲಿಂಗಪ್ಪನವರ ಸಂಪುಟದಲ್ಲಿ ಅರಸು 'ಸಾರಿಗೆ–ಗೃಹ ನಿರ್ಮಾಣ' ಇಲಾಖೆಯ ಸಚಿವರು, ಅರಸು ತಮ್ಮ ಬೆಂಬಲದ ಆಪ್ತ ತಿಮ್ಮೇಗೌಡರನ್ನು 'ಮೈಸೂರು ಗೃಹ ನಿರ್ಮಾಣ ಮಂಡಳಿ'ಯ ಅಧ್ಯಕ್ಷರನ್ನಾಗಿ ಮಾಡಿದರು. ರಾಜ್ಯದ ರಾಜಕೀಯ ಪ್ರವೇಶಿಸಿ, ತಮ್ಮ ವ್ಯಕ್ತಿತ್ವದ ಪ್ರಕಾಶನಕ್ಕೆ ಇದೊಂದು ಸುವರ್ಣ ಅವಕಾಶವಾಯಿತು. 1969ರಲ್ಲಿ

Please cite this article as: ಸುಶೀಲಮ್ಮ, ಎನ್. (2026). ಕರ್ನಾಟಕ ರಾಜಕೀಯದಲ್ಲಿ ಅರಸುರವರ ಸಾಧನೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4).* ಪು.ಸಂ. 93–104

ಕಾಂಗ್ರೇಸ್ ಇಬ್ಭಾಗವಾದಾಗ ಈ ರಾಮ–ಲಕ್ಷ್ಮಣರದ್ದು ಎರಡು ದಾರಿ. ಗೌಡರು ನಿಜಲಿಂಗಪ್ಪನವರನ್ನು ಹಿಂಬಾಲಿಸಿದರೆ, ಅರಸರು ಇಂದಿರಾ ಕಾಂಗ್ರೆಸ್ ನಾಯಕತ್ವವನ್ನು ವಹಿಸಿದರು. ಸಹಜವಾಗಿ ಸ್ಥಳೀಯವಾಗಿಯೂ ಕಾಂಗ್ರೆಸ್ ರಾಜಕಾರಣವೂ ಇಬ್ಭಾಗವಾಯ್ತು. ಹುಣಸೂರು ಭಾಗದ ಒಕ್ಕಲಿಗ ಪ್ರಮುಖರೆಲ್ಲ ಸಹಜವಾಗಿ ಗೌಡರಿಗೆ ಬೆಂಗಾವಲಾಗಿ ನಿಂತರು. ರಾಮ–ಲಕ್ಷ್ಮಣರಂತಿದ್ದ ಅರಸು–ಗೌಡರು 1978ರ ಚುನಾವಣೆಯಲ್ಲಿ ರಾಮ–ರಾವಣರಾಗಿ ಪರಸ್ಪರ ಎದುರು ನಿಂತರು. 'ಅರಸರ ಗೆಲುವು–ಗೌಡರ ಸೋಲು' ಈಗ ಇತಿಹಾಸ, ಗೌಡರು ಆಗ ಹೂಡಿದ್ದ ಮೊಕದ್ದಮೆ ಅರಸರ ಕೊನೆಯ ಗಳಿಗೆಯವರೆಗೂ ನಡೆಯಿತು. ಅನಿಶ್ಚಿತರ ರಾಜಕಾರಣದಲ್ಲಿ 'ಇಂದಿನ ಮಿತ್ರ, ನಾಳಿನ ಶತ್ರು'.

ಹುಣಸೂರು ಭಾಗದ ಒಕ್ಕಲಿಗ ರಾಜಕೀಯ ಮುಂದಾಳುಗಳೆಲ್ಲ ಗೌಡರ ದಾರಿ ಹಿಡಿದಾಗ ಅರಸರ ಬೆಂಗಾವಲಾಗಿ ನಿಂತವರು, ತರುಣ ವಕೀಲ ತಾಲೂಕು ಬೋರ್ಡ್ ಸದಸ್ಯ ಡಿ.ಕರಿಯಪ್ಪಗೌಡ, ಅರಸರು ಇಂದಿರಾ ಕಾಂಗ್ರೆಸ್ ಅಧ್ಯಕ್ಷರಾಗಿ ಪ್ರಚಂಡ ಜಯ ಪಡೆಯಿತು. ಅರಸರೇ ಮುಖ್ಯಮಂತ್ರಿ ಗೌಡರು ತಮ್ಮ ಗುರುವಿಗಾಗಿ ಸ್ಥಾನ ತೆರವು ಮಾಡಿ ಗುರುಭಕ್ತಿ ತೋರಿಸಿದರು. ಗುರು–ಶಿಷ್ಯರ ಸಂಬಂಧದ ಬೆಸುಗೆಯನ್ನು ಹುರಿಗೊಳಿಸಿದರು. ಅರಸರು ಗೆದ್ದು ಬಂದ ಬಳಿಕೆ ನೆರಳಾಗಿ ಹಿಂಬಾಲಿಸಿದ ಶಿಷ್ಯನನ್ನು ನಡು ನೀರಿನಲ್ಲಿ ಕೈಬಿಡದೆ ಅವರನ್ನು 'ವಯಸ್ಕರ ಶಿಕ್ಷಣ' ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿದರು. 1976ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಲು ನೆರವಾಗಿ ವಿಶ್ವಾಸದ ನಂಬಿಕೆಯನ್ನು ಪ್ರಕಟಿಸಿದರು.

ಅರಸರದು 'ಮೈಯೆಲ್ಲ ಬಂಗಾರ, ಕಿವಿ ಮಾತ್ರ ಹಿತ್ತಾಳೆ' ಎನ್ನುವಂತೆ ಚಾಡಿ ಮಾತಿಗೆ ಕಿವಿಗೊಡುವ ದೌರ್ಬಲ್ಯವಿತ್ತು. 1977ರಲ್ಲಿ ವಿದೇಶ ಪ್ರವಾಸದಿಂದ ವಾಪಸ್ಸು ಬಂದ ಗೌಡರು ಹೃದಯಾಘಾತಕ್ಕೆ ತುತ್ತಾಗಿ ಆಸ್ಪತ್ರೆ ಸೇರಿದರು. 'ಚುನಾವಣೆಯ ಸಮಯ. ಅವರು ಚುನಾವಣೆಯಲ್ಲಿ ನಿಮಗೆ ಸಹಾಯ ಮಾಡಬೇಕಾಗುತ್ತದೆಂದು ಅನಾರೋಗ್ಯದ ನೆಪಹೂಡಿ ಆಸ್ಪತ್ರೆ ಸೇರಿದ್ದಾರೆ' ಎಂದು ಸಮಯಸಾಧಕರು ಅರಸರ ಕಿವಿ ಊದಿದರು. ತಂದೆ–ಮಕ್ಕಳಂತೆ ನಿರ್ವಾಜ್ಯ ಪ್ರೇಮ ಹೊಂದಿದ್ದ ಅರಸು–ಗೌಡರ ಸಂಬಂಧ ಹುಳಿ ಹಿಂಡಿದ ಹಾಲಾಯಿತು. ಚಾಡಿ ಮಾತಿಗೆ ಕಿವಿಗೊಟ್ಟು ಅರಸು ಶಿಷ್ಯನನ್ನು ಕಾಣುವ ಸೌಜನ್ಯವನ್ನೂ ತೋರಲಿಲ್ಲ. ಇತ್ತ ಆಸ್ಪತ್ರೆಯಲ್ಲಿದ್ದ ಗೌಡರಿಗೆ 'ತನ್ನ ಗುರು ಇಂತಹ ಸ್ಥಿತಿಯಲ್ಲಿ ಇದ್ದಾಗಲೂ ನೋಡಲು ಬರದಿರುವಷ್ಟು ಹೃದಯವಂತಿಕೆಯನ್ನು ಕಳೆದುಕೊಂಡರಲ್ಲ' ಎಂದು ಮುನಿಸಿಕೊಂಡರು. ತಪ್ಪು ತಿಳುವಳಿಕೆಯಿಂದ ಒಪ್ಪವಾಗಿದ್ದ ಸಂಬಂಧ ಒಡೆಯಿತು. ಇಬ್ಬರಲ್ಲೂ ಪರಸ್ಪರ ಅಸಮಾಧಾನವಿದ್ದರೂ ಬಹಿರಂಗವಾಗಿ ವಿರೋಧಿಗಳಾಗಿರಲಿಲ್ಲ. ಒಂದು ಅವರಲ್ಲಿ ಪರಸ್ಪರ ಇದ್ದ ಗೌರವ, ಆತ್ಮೀಯತೆಯ ಸಾಕ್ಷಿ. ಅರಸರ ಅವಸಾನದ ಬಳಿಕ ಈ ಅಸಮಾಧಾನವು ಕರಗಿತು. 1982ರ ಚುನಾವಣೆಯಲ್ಲಿ ತಮ್ಮ ಗುರುವಿನ ಪುತ್ರಿ ಚಂದ್ರಪ್ರಭಾ ಅವರ ಜಯಕ್ಕೆ ಮನಃಪೂರ್ವಕವಾಗಿ ದುಡಿದು ತಮ್ಮ ಗುರು–ಶಿಷ್ಯರ ಸಂಬಂಧ ಸ್ವಾರ್ಥಪೂರ್ಣವಾದುದಲ್ಲ ಎಂಬುದಕ್ಕೆ ನಿದರ್ಶನವಾದರು. ಅರಸರು ತಮ್ಮ ಜೀವನದಲ್ಲಿ ಇಂತಹ ಅಪರೂಪದ ಶಿಷ್ಯರನ್ನೂ ಬೆಳೆಸಿದ್ದರು.

1956–57ರ ಚುನಾವಣೆಯಲ್ಲಿ ಅರಸರು ಹುಣಸೂರು ಕ್ಷೇತ್ರದಿಂದ ವಿಧಾನಸಭೆಗೆ ಆರಿಸಿ ಬಂದರು. 1962ರ ಚುನಾವಣೆಯಲ್ಲಿ ಅರಸು ಅವಿರೋಧವಾಗಿ ಆಯ್ಕೆಯಾದರು. ಚುನಾವಣಾ ರಾಜಕೀಯ

ಜೀವನದಲ್ಲಿ ಸೋಲನ್ನರಿಯದ ಹೆಗ್ಗಳಿಕೆಯ ರಾಜಕಾರಣಿ ಅರಸು. ನಿಜಲಿಂಗಪ್ಪನವರ ಸಂಪುಟದಲ್ಲಿ ಸಾರಿಗೆ ಸಚಿವರಾಗಿದ್ದಾಗ 'ರಾಜ್ಯದ ಸಂಚಾರ ವ್ಯವಸ್ಥೆಯನ್ನು ಸರಕಾರದ ಅಧೀನಕ್ಕೆ ತೆಗೆದುಕೊಂಡು ದಿಟ್ಟತನ ಪ್ರದರ್ಶನ ಮಾಡಿದರು. ಮುಂದೆ ನಿಜಲಿಂಗಪ್ಪನವರ ಎಡ–ಬಲದಲ್ಲಿದ್ದ ವೀರೇಂದ್ರಪಾಟೀಲ್ ರಾಮಕೃಷ್ಣ ಹೆಗ್ಗಡೆಯವರು ಅರಸರನ್ನು ದೂರವಿಟ್ಟರು. ಅದೇ ಹೆಗ್ಗಡೆಯವರು 1982ರ ಚುನಾವಣೆಯಲ್ಲಿ ಅರಸರ ಹೆಸರನ್ನು ಮಂತ್ರವಾಗಿ ಬಳಸಿಕೊಂಡರು.

ಸಾಧನೆಗಳು

ಅರಸು ಜೀವನದಲ್ಲಿ 1972ರ ಅವಧಿ ಸುವರ್ಣಯುಗ, ಮುಖ್ಯಮಂತ್ರಿ ಪಟ್ಟಾಭಿಷೇಕದ ಅದೃಷ್ಟ, ಅಧಿಕಾರ, ಜನತೆ ಕೊಟ್ಟ ಒಂದು ಹರಕೆ, ಅದನ್ನು ಇಂದಿರಾಗಾಂಧಿಯವರ ಕೃಪಾಕಟಾಕ್ಷದಿಂದ ಅರಸು ಹೊತ್ತು ನಿಂತರು. ವಿರೋಧಿಸುತ್ತಿದ್ದ ವಿರೋಧಿಗಳೆಲ್ಲ ಭಕ್ತರಾದರು. ಕೆಲವರಿಗಂತೂ ಅರಸು ಪವಾಡಪುರುಷರಾಗಿ ಬಿಟ್ಟರು. ಬರಬರುತ್ತಾ ದೇವರಾಜ ಅರಸರ ಒಡ್ಡೋಲಗದ ಸುತ್ತ ತುತ್ತೂರಿ ಊದುವವರ ಬಳಗ ಬೆಳೆಯಿತು. ಭಟ್ಟಂಗಿಗಳ ಪರಿವಾರ ಹರಡಿಕೊಂಡಿತು, ಜೊತೆಗೆ ಅರಸರ ಸಣ್ಣ–ಪುಟ್ಟ ದೌರ್ಬಲ್ಯಗಳನ್ನು ದುರುಪಯೋಗಪಡಿಸಿಕೊಳ್ಳುವ ತಂಡ ಬಲಿಯಿತು.

ರಾಜಕೀಯ ಕ್ಷೇತ್ರದಲ್ಲಿ ಎದುರಾಳಿಗಳನ್ನು ಮಣ್ಣು ಮುಕ್ಕಿಸಿದ ಚತುರ ರಾಜಕಾರಣಿ ಅರಸು. ಪ್ರಬಲ ಕೋಮುಗಳ ಬೆನ್ನು ಹುರಿಯನ್ನು ಮುರಿದರು. ವಿರೋಧಿಗಳನ್ನು ನಿಷ್ಕ್ರಿಯಗೊಳಿಸಿದರು. ಅಲ್ಪಸಂಖ್ಯಾತ ಜನಾಂಗದವರಲ್ಲಿ ಹೊಸ ಆಸೆ ಹುಟ್ಟಿಸಿ, ತಮ್ಮತ್ತ ಸೆಳೆದುಕೊಂಡರು. ಅಧಿಕಾರದ ಗದ್ದುಗೆಯನ್ನು ಭದ್ರಪಡಿಸುತ್ತಾ ದಣಿವಿಲ್ಲದೆ ಮುನ್ನಡೆದರು. ಜನರನ್ನು ಜಾತಿಯಿಂದ ಗುರುತಿಸುವ ಪರಿಪಾಠ ಬಂದಿತು. ಇದರಿಂದ ಅರಸರ ಕಾಲದಲ್ಲಿ 'ಜಾತಿಯ ಅಸ್ತಿತ್ವ' ಎದ್ದು ಕಂಡಿತು. ಇಂದು ಜಾತಿ ಅನೇಕರಿಗೆ ಆಸ್ತಿ, ಮಂತ್ರಿಸ್ಥಾನ ಗಿಟ್ಟಿಸುವುದಕ್ಕೆ ಜನಸೇವೆಗಾಗಿಯಲ್ಲ.

ಅರಸು ಕ್ಷಾತ್ರಶಕ್ತಿ ಪಡೆದ ರಾಜಕಾರಣಿ. ಪರಂಪರೆಯಿಂದ ಹೊಸಕಸುವಿನ ಅನುಭವದಿಂದ ರಾಜಕಾರಣದ ಮರ್ಮವನ್ನು ತಿಳಿದ ವ್ಯಕ್ತಿ. ಸಾಮಾಜಿಕ. ಆರ್ಥಿಕ ಪರಿವರ್ತನೆಯ ಪರಿಪೂರ್ಣ ಕಲ್ಪನೆ ಹೊಂದಿದ್ದ ಪ್ರಜ್ಞಾವಂತ. ಸಾರ್ವಜನಿಕ ಕಲ್ಯಾಣದ ಹಾದಿಯೇ ಅವರ ಗುರಿ. ಜನಕ್ಕೆ ಯಾವ ಕಾಲಕ್ಕೆ ಏನು ಅಗತ್ಯ ಅದನ್ನು ಮಾಡುವುದೇ ಅವರ ಜಾಣತನ. ರಾಜಕಾರಣದಲ್ಲಿ ಹೊಂದಾಣಿಕೆ ಮಾಡಿಕೊಂಡರೂ, ಸಾಮಾಜಿಕ ಚಿಂತನೆ ಹಾಗೂ ಅವುಗಳನ್ನು ಸಾಕಾರಗೊಳಿಸುವಲ್ಲಿ ರಾಜಿಯಿಲ್ಲದೆ ದೃಢತೆ ಅವರು ಅಧಿಕಾರದ ನೊಗ ಹೊತ್ತ ಬಳಿಕ ಅನೇಕ ಕ್ರಾಂತಿಕಾರಕ ಬದಲಾವಣೆಗಳಾದವು. ಸಮತೋಲನ ಪ್ರಗತಿ–ವಿಕಾಸಕ್ಕೆ ಅವಕಾಶ ಕಲ್ಪಿಸಿದರು. ಪ್ರಬಲ ಪ್ರಭಾವೀ ಜನಾಂಗಗಳ ಸ್ಥಿತಿವಂತರನ್ನು ಬಳಸಿಕೊಂಡು ಬಡಜನತೆಯ ಏಳಿಗೆಗೆ ಒಂದು ನೂತನ ಅಧ್ಯಾಯವನ್ನು ಸ್ಥಾಪಿಸಿದರು. ರಾಜ್ಯದಲ್ಲಿ ಅಸಮತೋಲನ ಹೋಗಿ, ಸಮತೋಲನ ಅಭಿವೃದ್ಧಿ, ಸುಧಾರಣೆಯ ಸಾಧ್ಯತೆಗಳು ಕಾಣಿಸಿಕೊಂಡವು. ಆಡಳಿತ ಯಂತ್ರವನ್ನು ಸಮರ್ಥವಾಗಿ ನಿರ್ವಹಿಸಿ ಅರಸು ತಮ್ಮ ರಾಜಕಾರಣ ಕೌಶಲ, ದಕ್ಷತೆಯನ್ನು ಪ್ರದರ್ಶಿಸಿ, ಕರ್ನಾಟಕದ ಜನತೆಯ ಹೃದಯದಲ್ಲಿ ಅವರು ಅನನ್ಯ ಎನಿಸಿದರು.

ಅರಸುರವರ ಪ್ರಮುಖ ಸಾಧನೆಗಳು

ರಾಜ್ಯಕ್ಕೆ ಮರುನಾಮಕರಣ

ಸಮಯ ಪ್ರಜ್ಞೆಯ ಚಾಣಾಕ್ಷ ರಾಜಕಾರಣಿ ಅರಸು. ವೈಯಕ್ತಿಕವಾಗಿ ಸರಿಯೆನ್ನಿಸದಿದ್ದರೂ ಜನಮನಕ್ಕೆ ಸ್ಪಂದಿಸುವ ಮನೋಭಾವ, ಆಡಿದಂತೆ ಮಾಡುವ ಧೀಮಂತ, ಆತ ಸಾಧಕನೆ ಹೊರತು, ಆಸ್ವಾಸಕನಲ್ಲ. ಪಕ್ಷ ರಾಜಕಾರಣ ದಕ್ಷ ಆಡಳಿತ, ಎರಡರ ಸಾರಥ್ಯವನ್ನೂ ಸಮರ್ಥವಾಗಿ ನಿರ್ವಹಿಸಿದ ಸಫಲ ರಾಜಕಾರಣಿ, ಅನೇಕ ಯೋಜನೆಗಳ ಮೂಲಕ ನಾಡಿನ ಅಭಿವೃದ್ಧಿಯ ಬಾಗಿಲು ತೆರೆದು ಸಮೃದ್ಧಿಯನ್ನು ತಂದು ಜನಜೀವನವನ್ನು ಉತ್ತಮಗೊಳಿಸಿದ ಹೆಮ್ಮೆ ಅವರದು. ಸಮೃದ್ಧಿ ಕೇವಲ ಕೆಲವರ ತಲೆಯ ಮೇಲಿನ ಕೀರಿಟವಾಗಬಾರದು. ದುರ್ಬಲರ ರಕ್ಷಣೆಯೊಂದಿಗೆ ಮೈಗೂಡಿರಬೇಕೆಂಬ ದೃಷ್ಟಿ ಘೋಷಣೆ ಜನತೆಯ ಆಕಾಂಕ್ಷೆಯಲ್ಲ; ಯಶಸ್ಸು ಪಡೆದ ಅಪರೂಪದ ಅದೃಷ್ಟವಂತ ರಾಜಕಾರಣಿ. ಅವರ ನಿಷ್ಠೆ, ದಕ್ಷತೆ, ದೂರದೃಷ್ಟಿಯಿಂದ ರಾಜ್ಯದ ಆರ್ಥಿಕ–ಸಾಮಾಜಿಕ ಸ್ಥಿತಿಗಳ ಉತ್ತಮ ಮಟ್ಟವನ್ನು ತಲುಪಿದವು. ಜನಹಿತಕ್ಕಾಗಿ ದುಡಿದು ಅರಸು ಜನತೆಯ ವಿಶ್ವಾಸ ಗಳಿಸಿದರು. ಜನ ಮೆಚ್ಚಿ ಅರಸು ತಲೆಗೆ ಗರಿ ಹಚ್ಚಿದರು. ಕಿರೀಟವಿಟ್ಟರು. ಕರ್ನಾಟಕವನ್ನು ಭಾರತದಲ್ಲಿ ಎದ್ದು ಕಾಣುವಂತೆ ಮಾಡಿದ ಕೆಲಸದಲ್ಲಿ ಅರಸು ಪಾತ್ರ ದೊಡ್ಡದು.

ಅರಸರ ಪ್ರಮುಖ ಸಾಧನೆಯ ಅಧ್ಯಾಯದಲ್ಲಿ ನಾಡಿಗೆ 'ನಾಮಕರಣ'. ಒಂದು ಕಾಲದಲ್ಲಿ ಅರಸು ಮೈಸೂರುವಾದಿ. 'ಮೈಸೂರು' ಹೆಸರಿನ ಬಗ್ಗೆ ಅತ್ಯಂತ ವ್ಯಾಮೋಹ ಇದ್ದ ವ್ಯಕ್ತಿ. ಅದರ ಹೆಸರಿನ ಅಸ್ತಿತ್ವಕ್ಕಾಗಿ ಪ್ರಬಲವಾಗಿ ಹೋರಾಡಿದ ಶಕ್ತಿ ಕಾಲ ಪಕ್ವವಾದಾಗ, ಅಖಂಡ ಜನತೆಯ ಅಭಿಪ್ಸೆಯ ವಿರುದ್ಧ ದಿಕ್ಕಿನಲ್ಲಿ ಹೋಗದ ವಿವೇಕಿ. ಹತ್ತಾರು ವರ್ಷಗಳಿಂದ ನೆನೆಗುದಿಯಲ್ಲಿ ಬಿದ್ದಿದ್ದ ಹೆಸರಿನ ಸಿಕ್ಕನ್ನು ಬಿಡಿಸಿದ ಚಾಣಾಕ್ಷ. ಜನಮನವನ್ನು ಒಲಿಸಿಕೊಂಡು ಈ ರಾಜ್ಯಕ್ಕೆ ನವೆಂಬರ್–01ರಂದು 'ಕರ್ನಾಟಕ' ಎಂದು ನಾಮಕರಣ ಮಾಡಿದ ಶಿಲ್ಪಿಯೂ ಆದರು. ನೂರಾರು ಕಾಲದ, ಲಕ್ಷಾಂತರ ಜನರ, ಭಾವನೆಗಳ ಕನಸು ಹೂವಾಗಿ ಪಲ್ಲವಿಸಿ, ನನಸಿನ ಫಲವಾಗಿ ಕೈ ಸೇರಿತು. ಹೀಗೆ ಅರಸು ತನ್ನ ಮಂಕು ಕಳೆದುಕೊಂಡು, ವಿವೇಕ ತೋರಿಸಿದ ಜಾಣ. ಇದು ಅವರ ಶ್ರೇಯಸ್ಸಿಗೆ ತೆರೆದ ಹೆದ್ದಾರಿ. ಇದರಿಂದ ಅರಸು ಇಡೀ ನಾಡಿನಲ್ಲಿ, ಎಲ್ಲ ವರ್ಗಗಳ ಪ್ರೀತಿ–ಗೌರವಗಳನ್ನು ಗಳಿಸಿ ಜನಪ್ರಿಯ ಜನ ನಾಯಕರಾದರು. ಈ ಅದ್ಭುತ ಸಾಧನೆಯಿಂದ ಅರಸು ಒಬ್ಬ ಅಲ್ಪಸಂಖ್ಯಾತ ಕೋಮಿಗೆ ಸೇರಿದವನೆಂಬ ಭಾವನೆಯೇ ಜನಮನದಿಂದ ದೂರವಾಯಿತು. ವಿರೋಧಿಗಳ ಮಾತೂ ಅರಣ್ಯ ರೋಧನವಾಯಿತು. ಮೈಸೂರು ಆಳುವ ಅರಸರು ಜನಮನದಲ್ಲಿ 'ಮೈಸೂರಿನ' ಬಗ್ಗೆ ತುಂಬಿದ್ದ ಭಾವನಾತ್ಮಕ ಆಕರ್ಷಣೆಯನ್ನು ದೇವರಾಜ ಅರಸರು ಕಿತ್ತೆಸೆದು, ರಕ್ತದ ಧಮನಿಯಲ್ಲಿ ಹರಿಯುತ್ತಿದ್ದ ಕವಿ ಮಂಗರಸರ ನಾಡಪ್ರೇಮ, ಅದೇ ವಂಶದ ಕುಡಿಯಲ್ಲಿ 'ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು' ಸಾಕಾರ ಸಾಫಲ್ಯತೆ ಪಡೆಯಿತು.

ಕನ್ನಡ ಭಾಷೆಗೆ ಆದ್ಯತೆ

ಕರ್ನಾಟಕದ ಚೈತನ್ಯ ಕನ್ನಡ ಭಾಷೆ ಅದು ಜನತೆಯ ಜೀವನಾಡಿ, ನುಡಿ ಬೆಳೆದರೆ ನಾಡು ಬೆಳೆದಂತೆ, ಜನಸಾಮಾನ್ಯನ ಉತ್ಕರ್ಷಕ್ಕಾಗಿ ಆತನಿಗೆ ತಿಳಿಯುವ ಆಡಳಿತ ಭಾಷೆಯಾಗಬೇಕೆಂಬ ಹೆಬ್ಬಯಕೆ ಅವರಿಗಿತ್ತು.

ಕನ್ನಡವನ್ನು, ಕನ್ನಡತನವನ್ನು ಬೆಳೆಸಿ, ಮೆರೆಸುವ ಸಂಕಲ್ಪ ಅವರದು. ರಾಜ್ಯದ ಎಲ್ಲ ಮಟ್ಟದಲ್ಲಿ ಆಡಳಿತ ಭಾಷೆಯಾಗುವಂತೆ ಕನ್ನಡ ಬಳಕೆಯ ಘೋಷಣೆ ಮಾಡಿದರು. ಅಗಾಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಿಚ್ಚುಗೈಯಿಂದ ಹಣ ನೀಡಿದರು. ಕವಿ–ಸಾಹಿತಿಗಳಿಗೆ ಮಾಸಾಶನದ ಗೌರವ ಮ್ನನಣೆಯೂ ಜಾರಿಗೆ ಬಂದಿತ್ತು. ಈ ಕಾಲದಲ್ಲಿ ಸಾಹಿತ್ಯ ಪರಿಷತ್ತು ತನ್ನ ಚಟುವಟಿಕೆಯ ಕಾರ್ಯ ಕ್ಷೇತ್ರವನ್ನು ಪಟ್ಟಣದಿಂದ ಹಳ್ಳಿಯವರೆಗೂ ವಿಸ್ತರಿಸಿಕೊಂಡಿತ್ತು. ಇದಲ್ಲದೆ 'ನಾನು ಮುಖ್ಯಮಂತ್ರಿಯಾಗಿರುವವರೆಗೂ 'ಬೆಳಗಾವಿ' ಯನ್ನು ಬಿಟ್ಟು ಕೊಡಲಾರೆ' ಎಂಬ ಧೀರವಾಣಿಯನ್ನೂ, 'ಕಾಸರಗೋಡನ್ನು ಕರ್ನಾಟಕದಿಂದ ಕಳಚಲು ಬಿಡಲಾರೆ' ಎಂಬ ಅಚಲತೆಯನ್ನು 'ಕೃಷ್ಣ–ಕಾವೇರಿ' ನದಿಜಲದ ಬಗ್ಗೆ ಕನ್ನಡಿಗರ ಔದರ್ಯವನ್ನು ಯಾರೂ ದುರುಪಯೋಗಪಡಿಸಿಕೊಳ್ಳಲು ಬಿಡೆವು' ಎಂಬ ದೃಢ ನಿಲುವು ಅರಸರನ್ನು ಜನ ಸಮರ್ಥ ನಾಯಕನೆಂದು ಒಪ್ಪಿಕೊಳ್ಳಲು ಕಾರಣಗಳಾದವು. ಹೀಗಾಗಿ ಅರಸುರವರಿಗೆ ಜನರ ಹೃದಯ ಸಿಂಹಾಸನದಲ್ಲಿ ಆದರಾಭಿಮಾನದ ಅಭಿಷೇಕವಾಯಿತು. ಅರಸು ಮಂದಸ್ಮಿತರಾದರು.

ಕ್ರಾಂತಿಕಾರಿ ಬದಲಾವಣೆಗಳ ಜಾರಿ:

ಅರಸು ತಮ್ಮ ಆಡಳಿತಕ್ಕೆ ಹೊಸ ಚೇತನ ತುಂಬಲು ಅನೇಕ ಕ್ರಾಂತಿಕಾರಿ ಬದಲಾವಣೆಗಳನ್ನು ಜಾರಿಗೆ ತಂದರು. ಹೀಗೆ ಜಾರಿಗೆ ತರುವಲ್ಲಿ ಆತ ತೋರಿದ ಪ್ರತಿಭೆ ಪ್ರಯೋಗಶೀಲತೆ ಅನುಕರಣೀಯ ಮಣ್ಣಿನ ಮಗನಾಗಿ ಹುಟ್ಟಿ ಮಣ್ಣಿನಲ್ಲೇ ಬೆಳೆದು ಭೂಮಿಯ ಮೇಲೆ ಸ್ವತಃ ನಿಂತು ಬೆವರು ಸುರಿಸಿದ ದುಡಿಮೆಗಾರ ಅರಸು. ಶೋಷಣೆ ಮಾಡಿ ಸುಖ ಪಡುತ್ತಿರುವವರ ಬದುಕಿಗೆ ಇತಿಶ್ರೀ ಹಾಡಿ ದುಡಿಮೆಗಾರರ ಯುಗವನ್ನು ಸ್ಥಾಪಿಸಲು ಸಂಕಲ್ಪಿಸಿ ಮಹತ್ವಪೂರ್ಣ ಹೆಜ್ಜೆಯನ್ನಿಟ್ಟರು. ಶೋಷಣಾರಹಿತ ಸಮಾಜ ನಿರ್ಮಾಣ ಮಾಡಲು ನಿಶ್ಚಯಿಸಿದರು.

ಸಮಾಜದಲ್ಲಿನ ಸಿರಿತನ ಬಡತನದ ಅಸಮಾನತೆಯನ್ನು ತೊಲಗಿಸಲು ಗ್ರಾಮ ನಗರಗಳ ನಡುವಣ ಅಂತರವನ್ನು ಕಡಿಮೆಗೊಳಿಸಲು ಭೂಮಾಲೀಕ–ಗೇಣಿದಾರನ ಮಧ್ಯದ ಕಂದಕವನ್ನು ಮುಚ್ಚಲು ದೃಢ ನಿರ್ಧಾರ ಕೈಗೊಂಡರು. ಅದುವರೆಗೆ 'ಉಳುವವನೇ ಹೊಲದೊಡೆಯ' ಎಂಬುದು ಬರೀ ಘೋಷಣೆ ಹಾಗೂ ಹೋರಾಟದ ಮಂತ್ರವಾಗಿತ್ತು.

ಭೂ ಸುಧಾರಣೆಗಳು

ದೇಶದ ಅಭಿವೃದ್ಧಿ ಮತ್ತು ಆರ್ಥಿಕ ಪ್ರಗತಿಗೆ ಭೂ ಸಮಸ್ಯೆಯ ಪರಿಹಾರ ಬಹಳ ಮುಖ್ಯವೆಂದು ಅರಸು ಭಾವಿಸಿದರು. ಭೂ ಸುಧಾರಣೆಯನ್ನು ತ್ವರಿತಗತಿಯಲ್ಲಿ ಜಾರಿಗೆ ತರಲು, ಸಮರ ಸಿದ್ಧತೆಯಲ್ಲಿ ಕಾರ್ಯಗತಗೊಳಿಸಲು, ಬೃಹತ್ ಯೋಜನೆಯನ್ನು ಹಮ್ಮಿಕೊಂಡರು. ಸಾಲ–ಸೋಲಗಳಲ್ಲಿ ಮುಳುಗಿ ಹೋಗಿದ್ದ ರೈತನಿಗೆ ಬಿಡುಗಡೆಯ ಬಾಗಿಲನ್ನು ತೆರೆದರು. ನಿಶ್ಚಿತ ಅವಧಿಯಲ್ಲಿ 'ಉಳುವವನೇ ಹೊಲದೊಡೆಯನನ್ನಾಗಿಸಲು ಪ್ರಗತಿಪರ ಶಾಸನ ತಂದರು. 'ಯಾರು ಗೇಣಿದಾರರಾಗಿದ್ದಾರೆ ಅವರಿಂದ ಭೂಮಿಯನ್ನು ಮಾಲೀಕರು ಹಿಂದಕ್ಕೆ ಪಡೆಯುವಂತಿಲ್ಲ. ಗೇಣಿ ಮಾಡುತ್ತಿದ್ದಾರೋ ಅವರೇ ಭೂಮಿ ಒಡೆಯರಾಗುವಂತೆ ಅವರಿಂದ ಭೂಮಿಯನ್ನು ಮಾಲೀಕರು ಹಿಂದಕ್ಕೆ ಪಡೆಯುವಂತಿಲ್ಲ. ಗೇಣಿ ಮಾಡುತ್ತಿದ್ದಾರೋ ಅವರೇ ಭೂಮಿಯ ಒಡೆಯರಾಗುವಂತೆ' ಶಾಸನ ಮಾಡಿದರು. ಇದು ರಕ್ತ ಬತ್ತಿ

ಹೋದ ರೈತರಿಗೆ ಹೊಸ ರಕ್ತ ತಂದಿತು. ಹೊಸ ಆಸೆ ಉದಯಿಸಿತು. ಈ ಕಾರ್ಯ ಅರಸರಿಗೆ ಕಿರೀಟ ತಂದಿತು.

ರೈತರ ಸಮಗ್ರ ರಕ್ಷಣೆ

ಹಳ್ಳಿಯ ರೈತರ ಸಮಗ್ರ ಅರಿವಿದ್ದ ಅರಸುರವರ ರೈತರ ರಕ್ಷಣೆಗೆ ಸೂಕ್ತ ಕ್ರಮ ಕೈಗೊಂಡರು. ಭೂಸುಧಾರಣೆಯನ್ನು ನ್ಯಾಯಾಲಯದ ಕಟಕಟೆಯಿಂದ ಆಚೆಗೆ ಇಟ್ಟರು. ಏಕೆಂದರೆ ಕಾನೂನು ಕಟ್ಟಳೆ ತಿಳಿಯದ ಮುಗ್ಧ ಬಡ ರೈತನಿಗೆ ನ್ಯಾಯಾಲಯಗಳೆಂದರೆ ಎಲ್ಲಿಲ್ಲದ ಭೀತಿ ತಿಳುವಳಿಕೆ ವಿದ್ಯೆ ಹೋರಾಟ ಮಾಡುವ ಚೈತನ್ಯವಿಲ್ಲದ ಆತ ಕಾನೂನು ಪರಿಜ್ಞಾನ ಹೊಂದಿ ಕೋರ್ಟು ಕಚೇರಿಯಲ್ಲಿ ತಮ್ಮ ಅಸ್ತಿತ್ವವನ್ನು ರಕ್ಷಿಸಿಕೊಳ್ಳಬಲ್ಲಂಥ ಸ್ಥಿತಿವಂತ ಭೂ ಮಾಲೀಕರು ಗೇಣಿದಾರರ ಕಾನೂನನ್ನು ಅಳವಡಿಸಿದರು. ನ್ಯಾಯಾಂಗ ಪದ್ಧತಿ ಈ ಗುರಿ ಸಾಧನೆಗೆ ದೊಡ್ಡ ಆಚರಣೆ ಎಂದು ಭೂ ಸುಧಾರಣಾ ಮಂಡಳಿಗಳನ್ನು ರಚಿಸಿ ಅದರ ತೀರ್ಪನ್ನು ನ್ಯಾಯಾಲಯದಲ್ಲಿ ಪ್ರಶ್ನಿಸದಿರುವ ಹಾಗೆ ಮಾಡಿದರು.

ಈ ನ್ಯಾಯ ಮಂಡಳಿಯಲ್ಲಿ ಕ್ಷೇತ್ರದ ಶಾಸಕರು ರೈತ ಪ್ರತಿನಿಧಿಗಳು ಪರಿಶಿಷ್ಟಜಾತಿ ಪ್ರತಿನಿಧಿಗಳು ಇರುವಂತೆ ವ್ಯವಸ್ಥೆ ಮಾಡಿದರು. ಇದು ರೈತನ ಪಾಲಿಗೆ ವರವಾಗಿ ಪರಿಣಮಿಸಿತು. ರೈತನ ಮಗನಾಗಿ ಹುಟ್ಟಿ, ಬೆಳೆದು ಅಧಿಕಾರ ಗ್ರಹಣ ಮಾಡಿದ ಆ ಸಲ್ಲಿಸಿದ ಅಲ್ಪ ಕಾಣಿಕೆ ಅದು. ದುಃಖ ನಿರಾಶೆ ಅಜ್ಞಾನ ಗುಲಾಮಗಿರಿಯ ಅಡಿಯಲ್ಲಿ ಶತಶತಮಾನದಿಂದ ಸಿಕ್ಕಿ ಸೊರಗಿದ ಗೇಣಿದಾರನಿಗೆ ಅಮೃತ ಸಿಂಚನವಾಯಿತು. ಉಳುವವನಿಗೆ ಅನ್ಯಾಯವಾದರೆ ಕಾನೂನು ಸಲಹೆ ಹಾಗೂ ನ್ಯಾಯ ಪಡೆಯಲು ನ್ಯಾಯಾಂಗದಲ್ಲಿಯೇ ಒಂದು ಪ್ರತ್ಯೇಕ ಮಂಡಳಿಯನ್ನು ಸ್ಥಾಪಿಸಲಾಯಿತು. ಅಲ್ಲದೇ ಭೂ ಸ್ವಾಧೀನಕ್ಕಾಗಿ ರೈತರು ಕೊಡಬೇಕಾದ ಹಣವನ್ನು ರಾಜ್ಯದ ಅಭಿವೃದ್ಧಿ ಬ್ಯಾಂಕಿನಿಂದ ಆರ್ಥಿಕ ನೆರವಿನಂತೆ ಒದಗಿಸಿ ದೂರದೃಷ್ಟಿ ತೋರಿದರು. ಈ ದಿಕ್ಕಿನಲ್ಲಿ ಸಫಲತೆಯನ್ನು ಸಾಧಿಸಿ ತೃಪ್ತಿಪಟ್ಟರು ಅರಸುರವರು.

ಜೀತ ಪದ್ಧತಿಯ ನಿವಾರಣೆ:

ಅರಸು ಮಾಡಿದ ಇನ್ನೊಂದು ಮಾನವೀಯ ಕಾರ್ಯವೆಂದರೆ 'ಜೀತ ವಿಮುಕ್ತಿ'. ಈ ಅಮಾನುಷ ಪದ್ಧತಿಗೆ ಮಂಗಳ ಹಾಡಿದ ಕರುಣಾಳು, ಮನುಷ್ಯತ್ವವೇ ಇಲ್ಲದ ಸಿರಿವಂತರ ದುಡಿಮೆಯ ಗಾಣಕ್ಕೆ ಸಿಕ್ಕಿ, ಕ್ರೌರ್ಯಕ್ಕೆ ಬಲಿಯಾದ ಈ ಜನರ ಬೆನ್ನುಬಾಗಿ, ಚೈತನ್ಯ ಅಡಗಿ ಹೋಗಿತ್ತು. ಅರಸು ಈ ಜೀತ ಪದ್ಧತಿಯನ್ನಯ ತಪ್ಪಿಸಿ ಈ ಶೋಷಿತ ಜನಾಂಗ ಸೆಟೆದು ನಿಲ್ಲುವಂತೆ ಮಾಡಿದರು. ಇಡೀ ರಾಜ್ಯದಲ್ಲಿ ಸುಮಾರು 65 ಸಾವಿರ ಜೀತದಾಳುಗಳು ಋಣ ವಿಮುಕ್ತಿ ಹೊಂದಿದರು. ಮುಕ್ತರಾದ ಜೀತದಾಳುಗಳಿಗೆ ಮುಂದಿನ ಜೀವನ ನಡೆಸಲು ಸರ್ಕಾರ ಸೌಲಭ್ಯಗಳನ್ನು ಒದಗಿಸುವ ಯೋಜನೆಯನ್ನು ಜಾರಿಗೆ ತಂದರು.

ತುರ್ತು ಪರಿಸ್ಥಿತಿಯ ದಿನಗಳಲ್ಲಿ ಅವರು 60 ಅಂಶಗಳ ಕಾರ್ಯಕ್ರಮಗಳನ್ನು ಅತ್ಯಂತ ಶ್ರದ್ಧಾಪೂರ್ಣವಾಗಿ ಜಾರಿಗೆ ತಂದರು. ನಾಡಿನ ಪ್ರಗತಿ ಸಾಧನೆಯಲ್ಲಿ ಹೊಸ ಹೆಜ್ಜೆಯನ್ನು ನಿರ್ಮಿಸಿದರು. ಅದರಲ್ಲೂ 'ಜೀತ ಪದ್ಧತಿ'ಯನ್ನು ತೆಗೆದುಹಾಕಿ ಅವರನ್ನು ಋಣಮುಕ್ತರನ್ನಾಗಿ ಮಾಡಿ ಸ್ವತಂತ್ರವಾದ ಜೀವನ ನಡೆಸುವುದಕ್ಕೆ ಅನುಕೂಲ ಮಾಡಿಕೊಟ್ಟು ಮಾನವೀಯತೆಯನ್ನು ಮೆರೆದು ಆದರ್ಶಪ್ರಾಯರಾದರು. ಸಾಲ–ಸೋಲಗಳಲ್ಲಿ ಮುಳುಗಿ ಹೋಗಿ ಕಗ್ಗತ್ತಲಿನಲ್ಲಿ ನರಳುತ್ತಿದ್ದ ಜನರ ಬದುಕಿಗೆ ಬೆಳಕು ನೀಡಿದರು.

ಸಮೃದ್ಧ ನಾಡಿಗೆ ತಳಹದಿ

ಬೆವರು ಸುರಿಸಿ ದುಡಿಯುವ ಜನಕ್ಕೆ ಕಾನೂನುಗಳನ್ನು ದೂರದ ಆಸೆಗಳಿಂದ ಹೊಟ್ಟೆ ತುಂಬದು. ಭೂರಹಿತ ಕೃಷಿ ಕಾರ್ಮಿಕರಿಗೆ, ಸಣ್ಣ ಹಿಡುವಳಿದಾರರಿಗೆ ಸಾಲ–ಸೌಲಭ್ಯ ಶೀಘ್ರಗತಿಯಲ್ಲಿ ದೊರಕುವಂತೆ ವ್ಯವಸ್ಥೆ ಮಾಡಲಾಯಿತು. ಸಣ್ಣ–ಪುಟ್ಟ ಸಾಲ ಪಡೆದವರಿಗೆ ಮರುಪಾವತಿಯಿಂದ ವಿನಾಯಿತಿ ನೀಡಿ ಶಾಸನ ಮಾಡಿದ ಅರಸು ಲಕ್ಷಾಂತರ ಮಂದಿ ಕಣ್ಣೀರು ಒರೆಸಿದ ದಯಾಳು. ಹೀಗೆ ಅರಸು ಅದುವರೆಗೆ ಅಲಕ್ಷ್ಯ ಮಾಡಲಾಗಿದ್ದ ಶೋಷಿತ ಹಾಗೂ ಗ್ರಾಮೀಣ ಜನರ ಬದುಕಿನ ಹೊಸ ಆಯಾಮ ನೀಡಿದರು. ಹೀಗೆ ಅರಸುರವರು ಸಮಷ್ಟಿ ಸಹಿತ ಸಾಧನೆಯಲ್ಲಿ ಬೇಡವಾದುದು ಅಳಿಯಬೇಕು ಬೇಕಾದುದು ಉಳಿಯಬೇಕು ಎನ್ನುವ ವಿವೇಕಿಯಾಗಿದ್ದರು.

ಅರಸು ಸಮೃದ್ಧ ನಾಡನ್ನು ಕಟ್ಟಲು ತಳಹದಿ ಹಾಕಿದರು. ಈ ನಾಡಿನಲ್ಲಿ ಮಳೆಯನ್ನು ಆಶ್ರಯಿಸಿದ ಕೃಷಿ ಭೂಮಿಯೇ ಹೆಚ್ಚು ಮಳೆ ಇಳಿಯದೆ, ಇಳೆ ಮೊಳೆಯದು. ಮಳೆಗಾಗಿ ರೈತ ಕಾಯುವುದು ತಪ್ಪಬೇಕು. ಅದಕ್ಕಾಗಿ ನೆಲದ ಆಳದಲ್ಲಿಯ ಜಲವನ್ನು ಬಳಕೆಗೆ ತರಬೇಕು. ಹರಿದು ವ್ಯರ್ಥವಾಗುವ ನೀರನ್ನು ಹಿಡಿದು ನಿಲ್ಲಿಸಿ ಸದುಪಯೋಗಪಡಿಸಿಕೊಂಡು ಈ ಭೂಮಿಯನ್ನು ಪೈರು ಪಚ್ಚೆಗಳಿಂದ ಕೂಡಿ ಹಚ್ಚ ಹಸಿರಾಗಿಸುವುದೇ ರೈತ ಏಳಿಗೆಯನ್ನು ಸಾಧಿಸುವ ಪಣತೊಟ್ಟು ಅರಸರ ಸಂಕಲ್ಪ ಅದಕ್ಕಾಗಿಯೇ ಜಲದ ಅಭಿವೃದ್ಧಿ ಯೋಜನೆ, ಸಣ್ಣ ನೀರಾವರಿ ಕಾಮಗಾರಿ, ಮಣ್ಣು ಸಂರಕ್ಷಣೆ, ಸಣ್ಣ ಹಾಗೂ ದೊಡ್ಡ ವಿದ್ಯುತ್ ಯೋಜನೆಗಳಿಗೆ ಅವರು ಆದ್ಯತೆ ನೀಡಿದರು. ಕಾಳಿ ಯೋಜನೆ ಆರಂಭ ಅರಸರ ಕಾಲದಲ್ಲಿಯೇ. ರಾಜ್ಯವು ವ್ಯವಸಾಯ ಕ್ಷೇತ್ರದಲ್ಲಿ ಪ್ರಗತಿ ಹೊಂದಿ ನೆರೆ ರಾಜ್ಯಗಳೊಂದಿಗೆ ಸರಿ ದೊರೆಯಾಗಿ ನಿಲ್ಲುವಂತೆ ಪ್ರಯತ್ನಿಸಿದ ಕರ್ಮಯೋಗಿ ಅರಸು. ಹೀಗೆ ನೀರಿನೊಂದಿಗೆ ಬೆಳಕು ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಅರಸು ರಾಜ್ಯದಲ್ಲಿ ನೆಲೆಯೂರಿತು.

ಇರಲೊಂದು ಊರು, ತಲೆಯ ಮೇಲೊಂದು ಸೂರು; ಎಲ್ಲರ ಕನಿಷ್ಟ ಆಶಯ, ಅಗತ್ಯ ಉಳುವವನೇ ಹೊಲದೊಡೆಯನನ್ನಾಗಿಸಲು ಕಾನೂನು ಕಟ್ಟಳೆ ಮಾಡಿಸಿದ ಅರಸು, ನಗರ–ಗ್ರಾಮಗಳು ಬಡಜನರಿಗೆ ತಮ್ಮದೇ ಆದ ಒಂದು ಚಿಕ್ಕ ಮನೆ ಕಟ್ಟಿಕೊಳ್ಳಲು ನೆರವಾದರು. ಆರ್ಥಿಕವಾಗಿ ದುರ್ಬಲರಾದವರಿಗಾಗಿ ಅರಸು ಸರಕಾರ ಉಚಿತ ನಿವೇಶನವನ್ನು ನೀಡುವ ಒಂದು ಬೃಹತ್ ಕಾರ್ಯಕ್ರಮವನ್ನೇ ಜಾರಿಗೆ ತಂದಿತು. ಜೊತೆಗೆ ಮನೆ ಕಟ್ಟಲು ಸಹಾಯಧನ, ಗೃಹ ನಿರ್ಮಾಣ ಸಂಸ್ಥೆಗಳ ಮೂಲಕ ಮನೆಗಳನ್ನು ನಿರ್ಮಿಸಿ ಹಂಚುವ ಯೋಜನೆ ಕಾರ್ಯಗತವಾಯಿತು. ಈ ಪೈಕಿ ಶೇ.55ರಷ್ಟು ಮನೆಗಳನ್ನು ಹಿಂದುಳಿದ ವರ್ಗಗಳಿಗೆ ಹಂಚುವ ಮೂಲಕ ಅರಸು, ಇಲ್ಲಿಯೂ ಅಸಮಾನತೆ ತೊಡೆಯುವ ಅಂಶಕ್ಕೆ ಒತ್ತು ನೀಡಿದರು.

ಅಷ್ಟೇ ಅಲ್ಲ ಜನ ಬರೀ ಬದುಕಿದರೆ ಸಾಲದು ತಲೆ ಎತ್ತಿ ಬದುಕಬೇಕು ಬದುಕಲು ತಲೆಬೇಕು ಬರೀ ಹೊಟ್ಟೆ ಸಾಲದು ಓದು ಇಲ್ಲದೆ ತಲೆ ಬೆಳೆಯದು ತಲೆಯಲ್ಲಿ ಕೂದಲು ಬೆಳೆದರೆ ಸಾಲದು ಒಳ್ಳೆಯ ವಿಚಾರ ಬೆಳೆಯಬೇಕು. ವಿಚಾರದ ಜೊತೆಗೆ ಒಳ್ಳೆಯ ಆಚಾರವೂ ಬೆಳೆಯಬೇಕೆಂಬುದು ಅವರ ಆಶಯ. ಆದರೆ ಬಡವನಿಗೆ ಕತ್ತಲಾಯಿತೆಂದರೆ ದಿನ ಕಳೆದಂತೆಯೇ ಹಣತೆ–ಬಡ್ತಿ ದೀಪಗಳನ್ನು ಜೂಡ ಬಳಸಲು ಆರ್ಥಿಕ

ಸಾಮರ್ಥ್ಯವಿಲ್ಲದ ಜನರಿಗೆ ಹೊತ್ತು ಮುಳುಗಿದ ಕೂಡಲೇ ಉಂಡು ಮಲಗುವ ಬಡವನಿಗೆ ತನ್ನ ಆಳಿವಿನಲ್ಲಿಯೇ ಬರುವ ವೈಚಾರಿಕ ವಿನಿಮಯಕ್ಕೆ ಚಿಂತನೆಗೆ ಅವಕಾಶವೆಲ್ಲಿ? ಬಡವರ ಆರ್ಥಿಕವಾಗಿ ದುಃಸ್ಥಿತಿಯಲ್ಲಿ ಇದ್ದವರ ನಡುವೆಯೇ ಮೂಡಿಬಂದ ಅರಸರು ಅಂಥವರೂ ತಮ್ಮ ವೈ–ಮನಗಳು ಬೆಳಕು ಕಾಣಬೇಕೆಂಬುದು ಆಶಯ ಅಂತಹವರ ಪ್ರತಿಯೊಂದು ಮನೆಗೂ ಸರಕಾರ ಒಂದೊಂದು ದೀಪ ಹಾಕಿಸಿ, ಬೆಳಕು ಕಾಣಿಸುವ ಅಪೂರ್ವ ಯೋಜನೆ 'ಭಾಗ್ಯಜ್ಯೋತಿ ಯೋಜನೆ' ಈ ಯೋಜನೆಯಿಂದ ಹಿಂದೆ ಅರಸರು ದಲಿತವರ್ಗ ಕಷ್ಟ–ಸುಖಗಳನ್ನು ಎಷ್ಟು ಚೆನ್ನಾಗಿ ಅರಿತಿದ್ದರು ಎಂಬುದರ ಪ್ರತಿಬಿಂಬ.

ಬದುಕನ್ನು ಪರಿವರ್ತಿಸುವ ಸಾಧನ ವಿದ್ಯೆ. ಓದಿನ ಮನೆಯ ಬಾಗಿಲು ಯಾರಿಗೂ ಮುಚ್ಚಿರಬಾರದು. ಒಂದು ಕಾಲಕ್ಕೆ ಭಾರತೀಯ ಸಮಾಜ ಶಿಕ್ಷಕರು ಹಾಗೂ ಅಶಿಕ್ಷಿತರ ನಡುವೆ ದೊಡ್ಡ ಕಂದಕವನ್ನು ನಿರ್ಮಿಸಿತ್ತು. ಕೆಲವು ಮೇಲ್ಜಾತಿಯವರನ್ನು ಬಿಟ್ಟರೆ, ಉಳಿದವರೆಲ್ಲರಿಗೂ ವಿದ್ಯೆ ನಿಷಿದ್ಧ, ಮಹಿಳೆಯರೂ ಎರಡನೆಯ ಗುಂಪಿಗೆ ಸೇರಿದವರಾಗಿದ್ದರು. ವ್ಯಕ್ತಿಯ ವಿಚಾರ ಸಾಮರ್ಥ್ಯವನ್ನು ಹೆಚ್ಚಿಸುವ ಅರಿವನ್ನು ಉಂಟುಮಾಡಿ ಜೀವನದ ದಾರಿಗುರಿಯನ್ನು ತಿಳಿಸಿಕೊಡುವ ಸಂಸ್ಕಾರವಂತರನ್ನಾಗಿ ಮಾಡುವ ವಿದ್ಯೆಗೆ ಬೇಲಿಬಿದ್ದಿತು. ಜನಸಂಖ್ಯೆಯ ಬಹುಪಾಲು ಅತ್ಯಂತ ದಾರುಣ ವಿಷಮತೆ ಅಪಾರ ಅಸಮಾನತೆ ಹಾಗೂ ತಿಳುವಳಿಕೆ ಇಲ್ಲದೇ ಮೌಢ್ಯದಲ್ಲಿ ಮುಳುಗಿದ್ದರಿಂದಲೆ ಅನ್ಯಾಕ್ರಮಣಕ್ಕೆ ದೇಶ ಪಕ್ಕಾಯಿತು. ಬ್ರಿಟಿಷರ ಆಳ್ವಿಕೆಯ ಪೂರ್ವ ಭಾರತದ ಸಮಾಜ ವ್ಯವಸ್ಥೆಯನ್ನೇ ಪಕ್ಷಪಾತ ಪೂರ್ಣವಾಗಿ ಮುಂದುವರಿಸಿದ ಇಂಗ್ಲಿಷರು ವಿದ್ಯೆ ನೀಡಿಕೆಯಲ್ಲಿ ಜನಾಂಗ ಹಾಗೂ ಲಿಂಗಭೇದವನ್ನು ಮಾಡಲಿಲ್ಲ. ಸ್ವಾತಂತ್ರ್ಯದ ಬಳಿಕ ವಿದ್ಯೆ ಎಲ್ಲರ ಸ್ವತ್ತಾಗಿರುವುದಕ್ಕೆ ಈ ಅಂಶವೂ ಕಾರಣ. ಸ್ವಾತಂತ್ರ್ಯದ ಬಳಿಕವೂ ರಾಜ್ಯಾಂಗದ ಪ್ರಕಾರ ಭಾರತ 'ಜಾತ್ಯಾತೀತ ರಾಷ್ಟ್ರ' ಎಂದು ಘೋಷಣೆ ಮಾಡಿಕೊಂಡಿದ್ದರೂ ಆದದ್ದು ಬೇರೆಯೇ. ಅಸಮಾನತೆ ತೊಲಗಲಿಲ್ಲ; ಆಸ್ಪೃಶ್ಯತೆ ಅಳಿಯಲಿಲ್ಲ. ಜಾತಿ ಪದ್ಧತಿ ಹೋಗಲಿಲ್ಲ. ಪ್ರತಿಯಾಗಿ ಒಂದೊಂದು ಸಾರ್ವತ್ರಿಕ ಮಹಾ ಚುನಾವಣೆಗಳೂ ಜಾತಿಯ ವಿಷ ವೃಕ್ಷಕ್ಕೆ ನೀರೆರೆದು ಪೋಷಿಸಿದವು. ಅಂತೆಯೇ ಇಡೀ ಸಮಾಜದ ಸ್ವತ್ತಾಗಬೇಕಾಗಿದ್ದ ವಿದ್ಯೆ ಜಾತಿ–ಕೋಮುಗಳ ಕೈಗೆ ಸಿಕ್ಕಿ ಸಿಕ್ಕಾಯಿತು. ಜಾತ್ಯಾತೀತರನ್ನಾಗಿ ಪ್ರಜೆಗಳನು ರೂಪಿಸುವ ಶಿಕ್ಷಣ ಕ್ಷೇತ್ರವನ್ನು ಜಾತಿ ಶಕ್ತಿಗಳಿಗೆ ದತ್ತು ಬಿಟ್ಟುಕೊಟ್ಟಿದ್ದು, ದೇಶದ ದೌರ್ಭಾಗ್ಯದ ಸಂಗತಿ.

ಹಿಂದುಳಿದ ವರ್ಗಗಳ ನ್ಯಾಯವಾದಿ, ರಾಜಕಾರಣಿ ಹಿಂದುಳಿದ ವರ್ಗದವರ ಆಯೋಗ ರಚನೆ (1979–75ರಲ್ಲಿ ವರದಿ ಸಲ್ಲಿಕೆ 1979ರಲ್ಲಿ ಜಾರಿ):

ಅರಸುರವರು ಹಾವನೂರು ವರದಿಯನ್ನು 'ಬೈಬಲ್ ಆಫ್ ದಿ ಬ್ಯಾಕ್ವರ್ಡ್ ಕ್ಲಾಸಸ್' ಎಂದು ಬಣ್ಣಿಸಿದ್ದಾರೆ. ಈ ರಾಷ್ಟ್ರ ವರ್ಗ–ವರ್ಣದ ವ್ಯವಸ್ಥೆಯಲ್ಲಿ ಸಿಲುಕಿ ನಲುಗಿ ಹೋಗುತ್ತಿದೆ. ಈ ಅಸಮಾನತೆಯನ್ನು ತೊಲಗಿಸಲು, ಅನಿಷ್ಟದ ಬೇರನ್ನು ಬುಡಸಹಿತ ಕಿತ್ತುಹಾಕಲು ಬಸವಣ್ಣನಿಂದ ಹಿಡಿದು ಲೋಹಿಯಾವರೆಗೂ ನಿರಂತರ ಹೋರಾಟ ಸಾಗಿಯೇ ಇದೆ. ಈ ದಿಕ್ಕಿನಲ್ಲಿ ಅರಸರ ನಿಲುವು ದಿಟ್ಟವಾದುದು. ಅವರು ಅಧಿಕಾರಕ್ಕೆ ಬಂದ ಕೂಡಲೇ ಎತ್ತಿಕೊಂಡ ಮಹತ್ವದ ಕಾರ್ಯ ಹಿಂದುಳಿದ ವರ್ಗಗಳ ಆಯೋಗದ ರಚನೆ, ಹಾವನೂರು ನೇತೃತ್ವದಲ್ಲಿ ಈ ನಾಡಿನ ಹಿಂದುಳಿದ ವರ್ಗ ಹಾಗೂ ಜಾತಿಗಳನ್ನು ಗುರ್ತಿಸಿ ಆ ವರದಿಯನ್ನು ಸಂಪೂರ್ಣವಾಗಿ ಜಾರಿಗೆ ತಂದಿದ್ದು ಅರಸರ ಹೆಗ್ಗಳಿಕೆ,

ಮೀಸಲಾತಿಯಲ್ಲಿ ಶೇ.64ರಷ್ಟು ಜಾರಿಗೆ ತಂದು, ಸಮಾಜದಲ್ಲಿ ತುಳಿತಕ್ಕೆ, ಮೇಲೆ ಬರಲು ಅವಕಾಶವಿಲ್ಲದ ಜನರು ಮೇಲೆ ಬರಲು ಬಹಳಷ್ಟರ ಮಟ್ಟಿಗೆ ಕಾರಣರಾದರು. ಬಸವಣ್ಣನವರು ಸಮಾಜವಾದಿಗಳು ಹೋರಾಟ ಮಾಡಿ ಹದಗೊಳಿಸಿದ ಭೂಮಿಯಲ್ಲಿ ಅರಸರು ಸುಧಾರಣೆಯ ಬೀಜ ಬಿತ್ತಿ ಹುಲುಸಾದ ಪೈರನ್ನು ತೆಗೆದರು. ಅರಸರ ಈ ಸಾಮಾಜಿಕ ನ್ಯಾಯದೃಷ್ಟಿಯಿಂದ ಕೈಗೊಂಡ ದಿಟ್ಟ ಹೆಜ್ಜೆಯಿಂದ ಕ್ರಾಂತಿಕಾರಿ ಸಮಾಜ ಸುಧಾರಕರಾಗಿ ಕಂಗೊಳಿಸಿದರು.

ಮಾನದಂಡಗಳು:

1. ಶೈಕ್ಷಣಿಕ ಹಿಂದುಳಿದಿರುವಿಕೆ
2. ಸಾಮಾಜಿಕವಾಗಿ ಹಿಂದುಳಿದಿರುವಿಕೆ
3. ಔದ್ಯೋಗಿಕವಾಗಿ ಹಿಂದುಳಿದಿರುವಿಕೆ

ನಿರುದ್ಯೋಗ ಪದವೀಧರರಿಗೆ ಮಾಸಿಕ ಭತ್ಯೆ:

ಯುವ ಪೀಳಿಗೆ 'ನಿರುದ್ಯೋಗ' ಭೂತದಿಂದಿ ಪೀಡಿತಗೊಂಡು ಹತಾಶಯ ಹೊಂಡದಲ್ಲಿ ಮುಳುಗುತ್ತಿದ್ದುದನ್ನು ತಪ್ಪಿಸಲು ನಿರುದ್ಯೋಗಿ ಯುವಕರಿಗೆ ನೆರವಾಗುವ ಸ್ಟೈಪಂಡರಿ ಯೋಜನೆಯನ್ನು ತಂದಿದ್ದಲ್ಲದೆ ಯುವಕರಿಗೆ ಉದ್ಯೋಗಾವಕಾಶ ಬೇಗ ಸಿಗಲೆಂಬ ಕಾರಣದಿಂದ ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸನ್ನು 58 ರಿಂದ 55 ವರ್ಷಗಳಿಗೆ ಇಳಿಸಿದರು. ಅರಸರ ಈ ಕ್ರಮ ದೂರದೃಷ್ಟಿಯಿಂದ ಕೂಡಿದ್ದ ಒಂದು ಪ್ರಶಂಸನೀಯ ಕ್ರಮವಾಗಿತ್ತು. ಆದರೆ ಮುಂದೆ ಅರಸರ ಈ ಕ್ರಮ ಸ್ವಾರ್ಥಿಗಳ ಒತ್ತಡಕ್ಕೆ ಒಳಪಟ್ಟು ಅಧಿಕಾರ ಪದವಿ ಮತಗಳಿಕೆಗೆ ಗುರಿಯಿಟ್ಟಿದ್ದ ಮಂದಿಯ ಪ್ರಭಾವದಿಂದ ಯುವಜನತೆಯ ಹಿತಾಸಕ್ತಿಯನ್ನು ಗಾಳಿಗೆ ತೂರಿ ಸರ್ಕಾರಿ ನೌಕರರ ನಿವೃತ್ತೊ ವಯಸ್ಸನ್ನು ಪುನಃ 58ಕ್ಕೆ ಏರಿಸುವ ಮೂಲಕ ನಿಷ್ಫಲಗೊಳಿಸಲಾಯಿತು. ಯುವಕರಿಗೆ ಉದ್ಯೋಗವಕಾಶ ತೆರೆದುಕೊಳ್ಳಲೆಂದು ಸರ್ಕಾರಿ ನೌಕರರು 20 ವರ್ಷ ಸೇವೆ ಸಲ್ಲಿಸಿದ ನಂತರ ಸ್ವಯಂ ನಿವೃತ್ತಿ ಪಡೆಯಬಹುದಾದ ಅವಕಾಶ ಕಲ್ಪಿಸಿದುದು ಅರಸರ ಇನ್ನೊಂದು ಶ್ಲಾಘನೀಯ ಕ್ರಮ. ಈಗ ಅದು 15 ವರ್ಷ ಸೇವೆಗೆ ಅನ್ವಯವಾಗಿರುವುದನ್ನು ಕಾಣಬಹುದು. ಅರಸರ ಈ ಕ್ರಮಗಳನ್ನು ಮುಂದೆ ಆಂಧ್ರ ಸರ್ಕಾರವು ಸಹ ಅಳವಡಿಸಿಕೊಂಡಿತೆಂದರೆ ಅರಸರ ಈ ಕ್ರಮಗಳೆಲ್ಲ ಅದೆಷ್ಟು ಜನಪ್ರಿಯವಾದವು ಸಮಾಜದ ಅಭಿವೃದ್ಧಿಗೆ ಪೂರಕವಾಗಿದ್ದವು ಜನಸಾಮಾನ್ಯರಿಗೆ ಹಿತಕಾರಿಯಾಗಿದ್ದವು ಎಂಬುದನ್ನು ನಾವು ತಿಳಿಯಬಹುದು.

ಮಲ ಹೊರುವ ಪದ್ಧತಿಯ ನಿರ್ಮೂಲನೆ (19–09–14) ಕುಣಿಗಲ್:

ವೃದ್ಧರ, ಅನಾಥರ, ಅಂಗವಿಕಲರ ಅಭಿವೃದ್ಧಿಗೆ ನೆರವಾಗುವಂತಹ 'ವೃದ್ಧಾಪ್ಯವೇತನ ಯೋಜನೆ, ಅಂಗವಿಕಲರ ವೇತನ ಯೋಜನೆ'ಗಳನ್ನು ಅನುಷ್ಠಾನಗೊಳಿಸಿದ್ದಲ್ಲಿದೆ ತಂದದ್ದೆ ಅಲ್ಲದೆ ಹರಿಜನರು 'ತಲೆಯ ಮೇಲೆ ಮಲಹೊತ್ತು' ಸಾಗಿಸಬೇಕಾಗಿದ್ದ ಅಮಾನುಷ ಪದ್ಧತಿಗೆ ಯುಕ್ತಿ ಮತ್ತು ಅಂತಹವರನ್ನು ಪೌರಕಾರ್ಮಿಕರನ್ನಾಗಿ ನಿಯುಕ್ತ ಮಾಡಿಕೊಂಡು ಕ್ರಮ, ಹಾವನೂರ ಆಯೋಗ ವರದಿಯನ್ನು ಪ್ರಬಲ ಕೋಮುಗಳ ಪ್ರಬಲ ವಿರೋಧದ ನಡುವೆಯೂ ಜಾರಿಗೆ ತಂದು ಅಲ್ಪಸಂಖ್ಯಾತ ಹಿಂದುಳಿದ ವರ್ಗದ

ಜನತೆಗೆ ಶೇ.55 ರಷ್ಟು ಮೀಸಲಾತಿ ತಂದುದು ನಿಜವಾಗಿ ಇಂದು ಅಲ್ಪಸಂಖ್ಯಾತರು ಹಿಂದುಳಿದ ವರ್ಗದವರು ಅರಸರನ್ನು ಸದಾ ಕೃತಜ್ಞತೆಯಿಂದ ಸ್ಮರಣೆ ಮಾಡಿಕೊಳ್ಳಬೇಕಾದ ಕ್ರಮಗಳಾಗಿವೆ.

ಕನಿಷ್ಠ ಕೂಲಿ ಪದ್ಧತಿ ಜಾರಿ:

ಜಾತಿ ಪದ್ಧತಿಯೊಂದಿಗೆ ಜಾರಿಯಲ್ಲಿರುವ ಇನ್ನೊಂದು ಅನಿಷ್ಟ ಪದ್ಧತಿ ಎಂದರೆ ಭೂಮಿಯಲ್ಲಿ ಹಗಲಿರುಳು ಮೈಮುರಿದು ದುಡಿದ ದುಡಿಮೆಗೆ ಹಿಡಿಕಾಳು ಇಕ್ಕಿ ಕಡಿಮೆ ಕೂಲಿ ಕೊಡುವ ಮೂಲಕ ಮಾಡುತ್ತಿದ್ದ ಶೋಷಣೆ ಶ್ರೀಮಂತ ಭೂಮಾಲೀಕರ ವರ್ಗ ಬಡ ಕೂಲಿಕಾರನಿಗೆ ನ್ಯಾಯವಾಗಿ ನೀಡಬೇಕಾದ ಕೂಲಿಯನ್ನು ಕೊಡಲು ಸಿದ್ಧರಿರಲಿಲ್ಲ. ಇದನ್ನು ಮನಗಂಡ ಅರಸು ಸರಕಾರ ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನಿಗದಿಪಡಿಸಿ ಅವರ ಶೋಷಣೆ ಮಾಡುವುದನ್ನು ನಿಲ್ಲಿಸಿ ಬದುಕನ್ನು ಸಾಧಿಸಲು ಅವಕಾಶ ಮಾಡಿಕೊಟ್ಟರು. ಈ ಕಾರ್ಯದಿಂದ ಪಟ್ಟಭದ್ರ ಹಿತಾಸಕ್ತಿಗಳ ಅಪಕೃಪೆಗೆ ಅರಸು ಪಾತ್ರರಾದರೂ ಅಪಾರ ಕಾರ್ಮಿಕ ವರ್ಗದ ಮೆಚ್ಚುಗೆಗೆ ಪಾತ್ರರಾದರು. ಈ ದಿಕ್ಕಿನಲ್ಲಿ ಅರಸು ಇಟ್ಟ ದಿಟ್ಟ ಹೆಜ್ಜೆಗಳು ಮಾಡಿದ ಕೆಲಸ ಬೆರಳು ಕಚ್ಚುವಂತಹದು. ಅಲ್ಲದೆ ಹೆಚ್ಚುವರಿ ಭೂಮಿಯನ್ನು ಸ್ವಂತ ನೆಲದಲ್ಲಿ ನಿಂತು ದುಡಿದು ಮಣ್ಣಾಗಲು ಹಂಬಲ ಹೊತ್ತ ಕೃಷಿ ಕಾರ್ಮಿಕರಿಗೆ ಹಂಚಲು ವ್ಯವಸ್ಥೆ ಮಾಡಿದರು. ಉಳ್ಳವರ ದುರಾಸೆ ಮತ್ತು ಕಪಟತನದಿಂದಾಗಿ ಅದು ವಿಫಲಗೊಂಡಿತು.

ಬಡ ಕೂಲಿಗಾರರಿಗೆ ಶ್ರೀಮಂತ ವರ್ಗ ಮಾಡುತ್ತಿದ್ದ ಶೋಷಣೆ, ಅನ್ಯಾಯಗಳಿಂದ ಅವರನ್ನು ಮೇಲೆತ್ತಲೆಂದು 'ಕನಿಷ್ಟಕೂಲಿ' ನಿಗದಿಪಡಿಸಿದರು. 'ಋಣಪರಿಹಾರ' ಕ್ರಮ ಕೃಷಿಕಾರ್ಮಿಕರಿಗೆ ಅವರು ನೀಡಿದ ಮತ್ತೊಂದು ಕೊಡುಗೆ, ಸಣ್ಣ ಪುಟ್ಟ ಸಾಲಗಳಿಂದ ಮನ್ನಾ ವಿನಾಯ್ತಿ ಘೋಷಿಸಿದ ಅವರ ಕ್ರಮ ಲಕ್ಷಾಂತರ ಬಡವರ ಪಾಲಿಗೆ ವರವೆನಿಸಿತು.

ಉಪಸಂಹಾರ

ದೇವರಾಜ ಅರಸರ ವರ್ಣರಂಜಿತ ಬದುಕಿಗೆ ಅವರ ಶಾರೀರಿಕ ಸಂಪತ್ತು ಪೂರಕವಾಗಿತ್ತು. ಕೆಂಪು ಮಿಶ್ರಿತ ಬಿಳಿಯ ಬಣ್ಣ, ಅಗಲವಾದ ದುಂಡು ಮುಖ ಹದವಾದ ಕಣ್ಣು ಮೂಗು ವಿಶಾಲವಾದ ಹಣೆ ತಲೆಯಲ್ಲಿ ತೆಳುವಾಗಿ ಹರಡಿದ ಬಿಳಿ ಮಿಶ್ರಿತ ಕಪ್ಪು ಕೇಶ, ಬುದ್ಧಿವಂತಿಕೆಯ ಲಕ್ಷಣ ಎಂಬಂತಹ ದೊಡ್ಡದಾದ ಕಿವಿಗಳು ತಲೆಯ ಭಾರಕ್ಕೆ ಸೋತು ಕುಸಿದಿದೆಯೇನೋ ಎಂಬಂಥ ಕುತ್ತಿಗೆ, ಮನಸ್ಸಿನಂತೆ ವಿಶಾಲವಾದ ಎದೆಯ ಹರವು, ನೀಳವಾಗಿ ತುಂಬಿಕೊಂಡ ಕೈಕಾಲು, ದೇಹಕ್ಕೆ ತುಸು ದೊಡ್ಡದೆನಿಸಿದರೂ ಗಾಂಭೀರ್ಯದ ಕಳೆತುಂಬಿದ ಹೊಟ್ಟೆ ಈ ಅಂಗ ಸೌಷ್ಟವಕ್ಕೆ ಒಪ್ಪುವಂಥ ಶುಭ್ರವಾದ ಬಿಳಿಯ ಖಾದಿಜುಬ್ಬ, ಅಚ್ಚುಕಟ್ಟಾಗಿ ಉಟ್ಟ ಕಚ್ಚೆ ಪಂಚೆ, ಕಾಲಿಗೆ ಬೂಟು, ನಡೆಯುವ ನಡಿಗೆಯಲ್ಲಿ ಗಾಂಭೀರ್ಯ ಇದು ಅವರ ಆಕರ್ಷಕ ಬಾಹ್ಯ ನಿಲುವು.

ಅರಸರ ಆಂತರಿಕ ನಿಲುವಿನಲ್ಲೂ ಅವರ ಅನುಭವ ಬುದ್ಧಿ ಪ್ರತಿಭೆ ಕಳಪೆಯಲ್ಲ. ಸಮಾಜದ ಸುಂದರ–ಭೂಷಣ ಮುಖಗಳೆರಡರ ದಟ್ಟ ಪರಿಚಯ. ಎಲ್ಲ ರಾಜಕೀಯ, ಸಾಮಾಜಿಕ, ಆರ್ಥಿಕ ವ್ಯವಸ್ಥೆಗಳ ಸಮಗ್ರ ಅರಿವು ಬೆದರಿಕೆಗೆ ಬಗ್ಗದ ಮನೋಸ್ಥೈರ್ಯ, ನಿರ್ಲಿಪ್ತತೆ ಅವರ ವಿಶಿಷ್ಟ ಗುಣ ಕಷ್ಟ ಕಂಡು ಕರಗುವ ಹೆಂಗರುಳು, ಸೇಡಿಗಿಂತ ಸ್ನೇಹದಲ್ಲಿ ಹೆಚ್ಚು ವಿಶ್ವಾಸ ಎಡತಾಕಿದ್ದನ್ನೆಲ್ಲಾ ಸವರಿ ಮುನ್ನಡೆಯುವ

ದಿಟ್ಟತನ ಅವರು ಸಿದ್ಧಾಂತಿಯಲ್ಲ ಸಾಧಕ, ವಸ್ತುನಿಷ್ಠ ದಕ್ಷ ಆಡಳಿತಗಾರ ನಿಷ್ಠುರವಾದಿ ಮಾಗಿದ ಅನುಭವ, ರಾಜಕೀಯ ಚತುರ ವ್ಯವಹಾರ ಆಡಳಿತ ತಂತ್ರ ರೀತಿ–ನೀತಿಗಳಿಗೆಲ್ಲ ಮಹಾಭಾರತದ ಮೇಲ್ಪಂಕ್ತಿ ಸಾಮಾನ್ಯ–ಅಸಾಮಾನ್ಯರ ಎಲ್ಲ ಸ್ತರಗಳಲ್ಲೂ ಕಾಣಿಸಿಕೊಂಡ ಎತ್ತರ.

ಅಂತ್ಯ–ಪಂಚಮನ ಉದ್ಧಾರದ ಹಾದಿಯಲ್ಲಿ ದಿಟ್ಟ ನಿಲುವು. ಸಾಕಷ್ಟು ಪ್ರಯೋಗ 'ಉದ್ದೇಶವನ್ನು ಕಾರ್ಯಗರ ಮಾಡುವಲ್ಲಿ ಅಳುಕು–ಅಂಜಿಕೆ ಇರಲಿಲ್ಲ. ದೀನ–ದಲಿತರ ನೇತಾರನಾದಗಿ ಕೀರ್ತಿ ಶಿಖರಕ್ಕೇರಿದ ಅದೃಷ್ಟವಂತ' ಅಂತೆಯೇ ವಿಶ್ವಾಸಘಾತಕ್ಕೆ ಒಳಗಾದ ದುರಂತ ವ್ಯಕ್ತಿಯೂ ಕೂಡ. ಅವರ ನಡೆ–ನುಡಿಯಲ್ಲಿ ಮೋಡಿ. ಅಣಕ ಇತ್ತು. ಔಚಿತ್ಯವರಿತು ಮಾತಾಡುವಲ್ಲಿ ಆಕರ್ಷಕ ಶೈಲಿಯಲ್ಲಿ ಸಾಹಿತ್ಯದ ಸಿರಿಯಿದೆ. ಆಹಾರದಂತೆ ಓದನ್ನೂ ಅರಗಿಸಿಕೊಳ್ಳುವ ಚೈತನ್ಯವಿತ್ತು. ಅವರ ಉಜ್ವಲ ವ್ಯಕ್ತಿತ್ವದಲ್ಲಿ ಪ್ರಜ್ವಲ ಸಾಧನೆಗಳಿವೆ. ಅಧಿಕಾರದ ಗದ್ದುಗೆಯಲ್ಲಿ ತಾನೂ ಕಂಗೊಳಿಸಿ, ಇತರರನ್ನೂ ಬೆಳೆಸಿದ ಔದಾರ್ಯ. ಹೀಗೆ ಅವರದು ತೆರೆದ ಮನಸ್ಸು ಮಾಗಿದ ವ್ಯಕ್ತಿತ್ವ ಈ ಉದಾರ ಚೇತನ ಸಾಹಸ–ನೋವಿನ ಕಥೆಯ ಉಜ್ವಲ ಬದುಕು ಬಹಳ ಕಾಲ ನಿಲ್ಲುವಂತಹ ಶಕ್ತಿಯುಳ್ಳದ್ದು, ಒಟ್ಟಿನಲ್ಲಿ ಭಾರತದ ರಾಜಕೀಯ ಇತಿಹಾಸಕ್ಕೆ ಒಂದಿ ತಿರುವು ತಂದುಕೊಟ್ಟ ಧೀಮಂತಿಕೆ ಅರಸು ಅವರದು.

ಅವರು ಚಿಕ್ಕವಯಸ್ಸಿನಿಂದಲೂ ಸ್ವಾಭಿಮಾನದ ಖನಿ. ಅಜ್ಜಿ ಅನಂತಮ್ಮಣ್ಣಿಯವರು ಈ ಕಿಡಿಯನ್ನು ಕಿಚ್ಚಾಗಿಸಿದ್ದರು. ವಂಶದವರ ಪ್ರತಾಪಗಳನ್ನು ಮಕ್ಕಳಿಗೆ ಬಣ್ಣಿಸಿ ಹೇಳುತ್ತಿದ್ದ ಆಕೆ ಆತ್ಮಬಲ, ಬುದ್ಧಿ ಬಲ, ದೇಶ ಬಲ ಬೆಳೆಸಿಕೊಳ್ಳಿ, ಆಗ ಎಲ್ಲರೂ ನಿಮ್ಮ ಬಳಿ ಬರುತ್ತದೆ. ಆಶ್ರು ಕೋರುತ್ತಾರೆ.' ಎಂದು ಪ್ರೇರೇಪಿಸುತ್ತಿದ್ದರು. ಅದೇ ರೀತಿ ಆಕೆ ಮಾನವೀಯ ಗುಣಗಳನ್ನುಊ ಮಕ್ಕಳ ಮನಸ್ಸಿನಲ್ಲಿ ಬಿತ್ತಿ ಬೆಳೆಸಿದರು. 'ಕಷ್ಟದಲ್ಲಿರುವವರನ್ನು ಕಂಡು ಕನಿಕರ ಪಡಬೇಕು. ಬೇಡದವರಿಗೆ ತಿರಸ್ಕಾರ ಮಾಡಬಾರದು. ಸಂಕಟಪಡುವವರಲ್ಲಿ ಸಹಾನುಭೂತಿ ತೋರಬೇಕು. ನುಡಿದದ್ದನ್ನು ಸಾಧಿಸಿ ತೋರಿಸುವ ಛಲಬೇಕು' ಎಂದು ಅವರು ಮಕ್ಕಳನ್ನು ಮೂಂದಿನ ಜೀವನಕ್ಕೆ ಅಣಿಗೊಳಿಸುತ್ತಿದ್ದರು. ಪರಂಪರಾನುಗತವಾಗಿ ಬಂದ ಈ ಗುಣ ವಿಶೇಷಗಳೆಲ್ಲ ಅರಸುವಿನ ಭವಿಷ್ಯದ ವ್ಯಕ್ತಿತ್ವಕ್ಕೆ ಪೂರಕವಾದವು.

ಅರಸರದು ಸ್ವತಂತ್ರ ಪ್ರವೃತ್ತಿ, ಇನ್ನೊಬ್ಬರ ನೆರಳು, ಆಶ್ರಯ ಹಿಡಿಸದು. ಅವರಿಗೆ ಬೋರ್ಡಿಂಗದ ಶಾಲೆಯ ರೀತಿ ನೀತಿಗಳು, ಕಟ್ಟುಪಾಡುಳು ಹಿಡಿಸಲಿಲ್ಲ. ಆರನೆಯ ತರಗತಿಯ ಹೊತ್ತಿಗೆ ಬೋರ್ಡಿಂಗ್ ಶಾಲೆಯುಂದ ಹೊರಬಂದರು, ಸಂಬಂಧಿಗಳ ನೆರವಿಗೆ ಕೈಚಾಚಲಿಲ್ಲ. ಸಹಾಯವಿಲ್ಲದೆ ವಿದ್ಯಾರ್ಥಿ ಜೀವನ ಸಾಗಿಸುವುದು ಕಷ್ಟ ಸಾಧ್ಯವಾಗಿತ್ತು. ವಿದ್ಯಾರ್ಥಿ ವೇತನ ಸಾಲುತ್ತಿರಲಿಲ್ಲ. ಆದರೂ ಛಲ ಬಿಡದೆ ತಾವೇ ಅಡಿಗೆ ಮಾಡಿಕೊಂಡು ಮನುಷ್ಯನಾಗಬೇಕೆಂಬ ಹಠದಿಂದ ಮುಂದುವರಿದರು, ಹೀಗೆ ಛಲ ಅವರ ಮೈಗಂಟಿದ ಗುಣ, ಒಮ್ಮೆ ಜೇಬಿನಲ್ಲಿ ಹೆಚ್ಚಿನ ಹಣವಿಲ್ಲದೇ ಕೆಲವೇ ಆಣೆಗಳನ್ನು ಹೊಂದಿದ್ದ ಅರಸು ಮೈಸೂರಿನಿಂದ ಕೃಷ್ಣರಾಜನಗರದವರೆಗೆ ಹೋಗಿ ಅಲ್ಲಿಂದ ಎತ್ತಿನಗಾಡಿಯಲ್ಲಿ ಹುಣಸೂರನ್ನು ತಲುಪಿ ರಾತ್ರಿಯಾದರೂ ಧೈರ್ಯ ತಂದುಕೊಂಡು ಇನ್ನೂ ಆರು ಮೈಲು ಮುಂದೆ ನಡೆದು ಮನೆಯನ್ನು ಸೇರಿದ್ದರು. ಅವರು ಮಂತ್ರಿಯಾಗಿದ್ದಾಗ 'ಹನಗೋಡು ಡ್ಯಾಮ್' ಒಡೆಯಿತು. ಇಂಜಿನಿಯರುಗಳು, ತಜ್ಞರುಗಳು ಪ್ರಾಣದ ಮೇಲಿನ ಆಸೆಯಿಂದ ಮಿಕಿಮಿಕಿ ನೋಡುತ್ತಾ ಗರ ಹೊಡೆದವರಂತೆ ಕಲ್ಲಾಗಿ ನಿಂತು

ಡ್ಯಾಮನ್ನು ಹತ್ತಲು ಹಿಂದೇಟು ಹಾಕಿದರು. ಆಗ ಅರಸು ಧೈರ್ಯ ತೆಗೆದುಕೊಂಡು ತಲೆಗೆ ಟೋಪಿ ಹಾಕಿಕೊಂಡು ಕಚ್ಚೆ ಬಿಗಿಯಾಗಿ ಕಟ್ಟಿಕೊಂಡು, ಆ ಕಟ್ಟೆಯ ಏರಿಯನ್ನು ಏರಿಯೇಬಿಟ್ಟರಂತೆ, ಆ ಕಟ್ಟೆ ನೀರಿನ ಹೊಡೆತದಿಂದ ಕೊಚ್ಚಿ ಹೋಗುವಾಗ ಇವರೂ ಕೊಚ್ಚಿಕೊಂಡು ಹೋಗಬೇಕಾಗಿತ್ತು. ಅದೃಷ್ಟದಿಂದ ಉಳಿದರು. ಹೀಗೆ ಸಮಯ ಸಂದರ್ಭದಲ್ಲಿ ಅರಸು 'ಹುಲಿ'ಯಂತೆ ಕೆಲಸ ಮಾಡಿರುವುದು ಅವರ ವ್ಯಕ್ತಿತ್ವಕ್ಕೆ ಕನ್ನಡಿಯಂತೆ.

ಗ್ರಂಥಋಣ

- ಸತ್ಯ–ಸಾಧನೆ : ಕೋಣಂದೂರು ವೆಂಕಪ್ಪಗೌಡ
- ದಿಟ್ಟ ರಾಜಕಾರಣಿ : ಎಂ.ಎಸ್.ರಾಮಯ್ಯ
- ದಿಟ್ಟನಾಯಕ : ಹೆಚ್.ಎಸ್.ಯೋಗೇಶ್
- ಸಾಧನೆಗಳ ಸರದಾರ : ದೇವರಾಜ ಅರಸು, ಸಂಶೋಧನಾ ಸಂಸ್ಥೆ, ಬೆಂಗಳೂರು
- ಸಾಮಾಜಿಕ–ಆರ್ಥಿಕ ಪರಿವರ್ತನೆಯ ಹರಿಕಾರ : ಡಾ.ಜಿ.ತಿಮ್ಮಯ್ಯ
- ಕರ್ನಾಟಕ ನಾಮಕರಣ : ಡಿ.ದೇವರಾಜ ಅರಸು
- ಜನ ನಾಯಕ :ಹೆಚ್.ಸಿ.ಶ್ರೀಕಂಠಯ್ಯ
- ಅರಸು ಭೂ ಸುಧಾರಣೆ : ಎಲ್.ಟಿ. ತಿಮ್ಮಪ್ಪ ಹೆಗ್ಗಡೆ